# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯರವರ ಘನ ಅಧ್ಯಕ್ಷತೆಯಲ್ಲಿ ದಿ:25.02.2021 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಮಿತಿಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀ. ಬಿ.ಸಿ. ಶಿವಣ್ಣ ಸ.ಅ | ಕಾರ್ಯದರ್ಶಿ. |
| 3. | ಶ್ರೀ.ಡಾ॥ ಮಂಜುನಾಥ್ | Covid Doctor |
| 4. | ಶ್ರೀ. ಶಿವಕುಮಾರ್ | ಕಂ.ಪ |
| 5. | ಶ್ರೀ. ಜಗದೀಶ್ | ಹಿ.ಆ.ಪ |
| 6. | ಶ್ರೀ. ಶಾಂತಕುಮಾರ್ | JHI |
| 7. | ಶ್ರೀ. ದೊಡ್ಡವೀರಪ್ಪ ಸ.ಅ | BWSSB |
| 8. | ಶ್ರೀ. ಅರುಣ್ ಕುಮಾರ್ ಸ.ಅ | ಬೆಸ್ಕಾಂ |
| 9. | ಶ್ರೀ. ಕೆ.ಎಲ್. ಉಮೇಶ್ | ಕೆ.ಪ |
| 10. | ಶ್ರೀ. ಮಹೇಶ್ ಬಿ.ಎಂ | Traffic Police |
| 11. | ಶ್ರೀ. ಹನುಮಂತ್ ರಾಜು | Senior Veterinary Doctor |

ವಾರ್ಡಿನ ಕಾರ್ಯದರ್ಶಿಗಳಾದ ಶ್ರೀ.ಬಿ.ಸಿ.ಶಿವಣ್ಣ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

**HEALTH**

ಶ್ರೀ.ಡಾ॥ ಮಂಜುನಾಥ ರವರು ನಾಯಿ ಕಡಿಯುತ್ತಿರುವ ಸಂಖ್ಯೆ ಹೆಚ್ಚುತ್ತಿದ್ದು, ನಾಯಿ ಹಿಡಿಯಲು ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದರು. ಶ್ರೀ.ಹನುಮಂತ ರಾಜು ಪಶುಪಾಲನ ನಿರೀಕ್ಷಕರು ಹಾಜರಿದ್ದು ನಾಯಿಗಳನ್ನು ತೆಗೆದುಕೊಂಡು ಹೋಗಿ Vaccination ನೀಡಿ ಮೂರು ದಿನ ಶುಶ್ರೂಷೆ ಮಾಡಿ ಮತ್ತೆ ಅದೆ ಸ್ಥಳಕ್ಕೆ ಪುನಃ ಬಿಡುವ ಕಾರ್ಯಕ್ರಮವನ್ನು CUPA ಗುತ್ತಿಗೆದಾರರಿಗೆ ವಹಿಸಿದ್ದು ಅವರು ನಿರ್ವಹಿಸುವುದಾಗಿ ತಿಳಿಸಿದರು.

ಸಾರ್ವಜನಿಕರಿಗೆ Awareness ಬಗ್ಗೆ ಬಿಲ್ಸ್‌ಗಳನ್ನು ಹಂಚುವುದಾಗಿ ತಿಳಿಸಿದರು. ಈಗ ಅಸ್ಪತ್ರೆಯಲ್ಲಿ ರೇಬೀಸ್ ಲಸಿಕೆ ಲಭ್ಯವಿಲ್ಲದ ಕಾರಣ ಬಹಳ ಸಮಸ್ಯೆಯಾಗುತ್ತಿದ್ದು ಶೀಘ್ರವಾಗಿ ಕ್ರಮ ಕೈಗೊಳ್ಳುವಂತೆ ವಿನಂತಿಸಿದರು.

ಕೋವಿಡ್-19 Testing ಬಗ್ಗೆ ಚರ್ಚಿಸಲಾಯಿತು. ಶ್ರೀ.ಜಗದೀಶ್ (ಹಿ.ಆ.ಪ) ರವರು ಕೋವಿಡ್-19 Testing ಬಗ್ಗೆ ವಿವರಿಸಿದರು. ಇದುವರೆಗೂ 560 Case ಗಳು ಪತ್ತೆಯಾಗಿದೆ, ಇದುವರೆಗೂ 441 ಜನರು Discharge ಆಗಿದ್ದಾರೆ, ಮನೆಯಲ್ಲಿ 232 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ, ಈಗ 4 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದುವರೆಗೂ 25 ಜನರು ಮರಣ ಹೊಂದಿರುತ್ತಾರೆ ಈಗ 10 Active Case ಗಳು ಇರುತ್ತದೆ. ಪ್ರತಿದಿನ ವಾರ್ಡ್‌ನ ಯಾವುದಾದರೂ ರಸ್ತೆಯಲ್ಲಿ ಒಂದು ಕಡೆ, ಕೋವಿಡ್-19 Testing ನಡೆಸುತ್ತಿರುವುದಾಗಿ ವಿವರಿಸಿದರು. ಕೋವಿಡ್-19 ರೋಗವನ್ನು ನಿಯಂತ್ರಿಸಲು ಕೋವಿಡ್ Shield Injection ಅನ್ನು ನೀಡಲು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎಲ್ಲಾ ರೀತಿಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ತಿಳಿಸಿದರು.

**BWSSB**

- ಬಾಪೂಜಿನಗರದ Manhole ನ ಗಳಿಂದ ತೆಗೆದಿದ್ದ್ ಮಣ್ಣನ್ನು ಗೀತಾಶ್ರಮದ ಹತ್ತಿರ, ಶಾಮಣ್ಣ ಗಾರ್ಡ್‌ನಲ್ಲಿ ಬಿಲಾಲ್ ಮಸೀದಿ ಬಳಿ ಹಾಗೆಯೆ ಬಿಟ್ಟಿರುತ್ತಾರೆ ಅದನ್ನು ತೆರವುಗೊಳಿಸಬೇಕೆಂದು ಶ್ರೀ. ಯಶ್ವಂತ್ ರವರು ಕೋರಿದರು ಶ್ರೀ.ದೊಡ್ಡವೀರಪ್ಪ ಸ.ಅ (BWSSB) ರವರು ತೆರವುಗೊಳಿಸುವುದಾಗಿ ತಿಳಿಸಿದರು.

**REVENUE**

- ಶ್ರೀ.ಶಿವಕುಮಾರ್ RI ರವರು Tax Collection ಬಗ್ಗೆ ವಿವರಿಸಿದರು ಹಿಂದಿನ ಪಾಕ್ಷಿಕದಲ್ಲಿ ಅಂದಾಜು ರೂ: 9.1 ಲಕ್ಷಗಳು ತೆರಿಗೆ ಸಂಗ್ರಹಿಸಿರುವುದಾಗಿ ತಿಳಿಸಿದರು.

**SWM**

- 2ನೇ ಮುಖ್ಯರಸ್ತೆ ಬಾಪೂಜಿನಗರದ ಫುಟ್‌ಪಾತ್ ಮೇಲೆ ಬೋಂಡ ಅಂಗಡಿಗಳನ್ನು ಶುರುಮಾಡಿದ್ದು ವಾಹನ ಸಂಚಾರಕ್ಕೆ ಅಡಚಣೆಯಾಗುತ್ತಿದೆ ಎಂದು ಶ್ರೀ.ಸುರೇಶ್ ರವರು ಆರೋಪಿದರು. ಅಧ್ಯಕ್ಷರು ಪರಿಶೀಲಿಸಿ ನೋಟೀಸ್ ನೀಡಿ ಕ್ರಮ ಕೈಗೊಳ್ಳುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.
- 5ನೇ ಕ್ರಾಸ್ ಬಳಿ ಚಿಕ್ಕ ಕ್ರಾಸ್‌ಗಳಲ್ಲಿ ಕಸವನ್ನು ತೆರವುಗೊಳಿಸದ ಕಾರಣ ಕ್ರಮಕೈಗೊಳ್ಳುವಂತೆ ಶ್ರೀ ಶಾಂತಕುಮಾರ್ ಕಿ.ಆ.ಪ ರವರಿಗೆ ಅಧ್ಯಕ್ಷರು ಸೂಚಿಸಿದರು.

**BESCOM :**

ಶ್ರೀ. ಮಂಜುನಾಥ್ Electrical Maintenance agency ರವರು ಹಜಾರಿದ್ದು 2ನೇ ಮುಖ್ಯರಸ್ತೆ 5ನೇ ಕ್ರಾಸ್, ಹಾಗೂ ಶಾಮಣ್ಣ ಗಾರ್ಡ್‌ನಲ್ಲಿ ಸುಮಾರು 40 Fitting ಗಳನ್ನು ಬದಲಾಯಿಸಿರುವುದಾಗಿ ತಿಳಿಸಿ ಬೀದಿ ದೀಪಗಳ ನಿರ್ವಹಣೆಯನ್ನು ತಪ್ಪದೆ ಪಾಲಿಸುವುದಾಗಿ ತಿಳಿಸಿದರು.

**ENGINNER:**

CC Cameraಗಳ ಕಾಮಗಾರಿಗೆ ಅನುಮತಿ ದೊರೆತ್ತಿದ್ದು Work Order ಆಗಿದ್ದು ಅವಶ್ಯಕತೆ ಇರುವ ಸ್ಥಳಗಳಲ್ಲಿ ಜೋಡಿಸಿಕೊಡುವುದಾಗಿ ಕಾರ್ಯದರ್ಶಿ ರವರು ಸಭೆಗೆ ತಿಳಿಸಿದರು.

ಈ ಕೆಳಕಂಡ ಕಾಮಗಾರಿಗಳು ಅವಶ್ಯಕವೆಂದು ಅದನ್ನು ಬಿಬಿಎಂಪಿ ಅನುದಾನದಲ್ಲಿ ಕಾಮಗಾರಿ ನಿರ್ವಹಿಸಲು ಮನವಿ ಸಲ್ಲಿಸಿರುವುದಾಗಿ ಕಾರ್ಯದರ್ಶಿರವರು ಸಭೆಗೆ ತಿಳಿಸಿದರು.

| ಕ್ರಸಂ | ಕಾಮಗಾರಿ ವಿವರ |
|---|---|
| 1. | Asphalting to Shamanna garden surrounding areas in Ward No 134 |
| 2. | Asphalting & Cement Concrete to Puttaswamy gowda Layout & surrounding roads in Ward No 134 |
| 3. | Providing of name board in ward no 134 |
| 4. | Engaged Silt and Tractor in Ward No:-134 |
| 5. | Emergency Works in Ward No:-134 |
| 6. | Drilling of Bore well in ward no 134. |

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸಿ ವರದಿಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.

ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 25.02.2021

25/02/2021

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 134